# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಾರ್ವಜನಿಕ ಸಂಪರ್ಕ ವಿಭಾಗ, ನರಸಿಂಹರಾಜ ವೃತ್ತ, ಬೆಂಗಳೂರು-560 002**

***ಪತ್ರಿಕಾ ಪ್ರಕಟಣೆ*** **ದಿನಾಂಕ: 27.05.2011**

## *ಅನಧಿಕೃತವಾಗಿ ಕೇಬಲ್ ಅಳವಡಿಸಲು ರಸ್ತೆ ಅಗೆದಿದ್ದಕ್ಕೆ 7.20 ಲಕ್ಷ ರೂ. ದಂಡ*

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಪೂರ್ವ ವಲಯ ವ್ಯಾಪ್ತಿಯಲ್ಲಿ ಬರುವ ವಾರ್ಡ್ ನಂ.93ರ ರೈಲ್ವೇ ಸಮಾನಾಂತರ ರಸ್ತೆಯಲ್ಲಿ ಅನಧಿಕೃತವಾಗಿ ಕೇಬಲ್ ಅಳವಡಿಸಲು ರಸ್ತೆ ಅಗೆಯುತ್ತಿದ್ದ ಮೆ|| ಟಾಟಾ ಕಮ್ಯೂನಿಕೇಷನ್ಸ್ ಸಂಸ್ಥೆಗೆ ಹೆಚ್.ಡಿ.ಡಿ. ಮುಖಾಂತರ ಓ.ಎಫ್.ಸಿ. ಕೇಬಲ್ ಅಳವಡಿಸಲು ನೀಡಿದ್ದ ಎಲ್ಲಾ ಆದೇಶಗಳನ್ನು ಪೂರ್ವ ವಲಯದ ಮುಖ್ಯ ಅಭಿಯಂತರರು ದಿನಾಂಕ: 20.05.2011 ರಂದು ರದ್ದುಪಡಿಸಿದ್ದರೂ ಕೂಡಾ ಸದರಿ ಕಂಪನಿಯವರು ದಿನಾಂಕ: 26.05.2011 ರಂದು ರಾತ್ರಿ 9.00 ಗಂಟೆಯಲ್ಲಿ ಬಿ.ಡಿ.ಎ. ವೃತ್ತದಿಂದ ಶಿವಾನಂದ ವೃತ್ತದ ರೈಲ್ವೇ ಬ್ರಿಡ್ಜ್‌ವರೆಗೆ 1200 ಮೀ ವರೆಗಿನ ಡಾಂಬರು ರಸ್ತೆ ಕತ್ತರಿಸಿ, ಓ.ಎಫ್.ಸಿ. ಕೇಬಲ್‌ನ್ನು ಅನಧಿಕೃತವಾಗಿ ಅಳವಡಿಸುತ್ತಿರುವ ಬಗ್ಗೆ ಪೂಜ್ಯ ಮಹಾಪೌರರು, ಉಪ ಮಹಾಪೌರರು ಮತ್ತು ಆಯುಕ್ತರ ಗಮನಕ್ಕೆ ಬಂದ ಕೂಡಲೇ ಸ್ಥಳಕ್ಕೆ ಭೇಟಿ ನೀಡಿದರು ಮತ್ತು ಕಂಪನಿ ಮೇಲೆ ದಂಡ ವಿಧಿಸಲು ಸೂಚಿಸಿದರು.

ಈ ಹಿನ್ನೆಲೆಯಲ್ಲಿ ದಿನಾಂಕ: 27.05.2011 ರಂದು ವಸಂತನಗರ ಉಪ ವಿಭಾಗದ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಸ್ಥಳಕ್ಕೆ ಭೇಟಿ ನೀಡಿ, ಪರಿಶೀಲಿಸಿದ ಸಂದರ್ಭದಲ್ಲಿ ಮೆ|| ಟಾಟಾ ಕಮ್ಯೂನಿಕೇಷನ್ಸ್ ಸಂಸ್ಥೆಯವರು 1200 ಮೀ. ಉದ್ದದ ಕೇಬಲ್‌ನ್ನು ಅನಧಿಕೃತವಾಗಿ ಹಾಕಿರುವುದು ಕಂಡುಬಂದಿದ್ದು ಹಾಗೂ ಪಾಲಿಕೆಯ ಅನುಮತಿ ಇಲ್ಲದೇ ಅನಧಿಕೃತವಾಗಿ ಪಾಲಿಕೆಯ ಆಸ್ತಿಗೆ ನಷ್ಟ ಉಂಟು ಮಾಡಿರುವುದಕ್ಕೆ ರೂ.7.20 ಲಕ್ಷ ರೂ.ಗಳ ದಂಡವನ್ನು ವಿಧಿಸಲಾಗಿದೆ ಎಂದು ಕಾರ್ಯಪಾಲಕ ಅಭಿಯಂತರರು (ಶಿವಾಜಿನಗರ) ವಿಭಾಗ ರವರು ತಿಳಿಸಿದ್ದಾರೆ.

**ಸಾರ್ವಜನಿಕ ಸಂಪರ್ಕಾಧಿಕಾರಿ**

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಾರ್ವಜನಿಕ ಸಂಪರ್ಕ ವಿಭಾಗ, ನರಸಿಂಹರಾಜ ವೃತ್ತ, ಬೆಂಗಳೂರು-560 002**

***ಪತ್ರಿಕಾ ಪ್ರಕಟಣೆ*** **ದಿನಾಂಕ: 27.05.2011**

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಆಯುಕ್ತರು ಇಂದು ವಲಯ ಅಪರ/ಜಂಟಿ ಆಯುಕ್ತರು ಹಾಗೂ ಮುಖ್ಯ ಅಭಿಯಂತರರುಗಳನ್ನು ಕರೆದು ಪಾಲಿಕೆಯಿಂದ ಪರಿಸರ ರಕ್ಷಣೆ ಹಾಗೂ ಅಂತರ್ಜಲ ವೃದ್ಧಿಗಾಗಿ ಮರಗಳ ಸುತ್ತಲು ಪಾತಿ ಮಾಡುವ ಯೋಜನೆ ಕುರಿತು ಸಾರ್ವಜನಿಕರಿಂದ ಟೀಕೆ, ಟಿಪ್ಪಣಿಗಳು ಬರುತ್ತಿರುವ ಬಗ್ಗೆ ಸುದೀರ್ಘವಾದ ಚರ್ಚೆ ನಡೆಸಿದರು. ಮರಕ್ಕೆ ಪಾತಿ ಕಟ್ಟುವ ಕಾರ್ಯದಲ್ಲಿ ಪ್ರತಿ ಮರದ ಸುತ್ತಲೂ ಸರಾಸರಿಯಾಗಿ 1.50 ಮೀ ಉದ್ದ ಮತ್ತು 1.5 ಮೀ ಅಗಲದ ಪಾತಿ ಮಾಡಲಾಗುತ್ತಿದೆ. PWD SR Rate ಪ್ರಕಾರ ಒಂದು ಪಾತಿ ನಿರ್ಮಿಸಲು ಸುಮಾರು 1,500 ರೂ.ನಿಂದ 2,500 ರೂ. ವೆಚ್ಚವಾಗುತ್ತಿದೆ. ದೊಡ್ಡದಾದ ಮರ ಇರುವ ಕಡೆ 3,000 ರೂ.ಗಳು ಆಗಬಹುದು ಅದಕ್ಕಿಂತ ಹೆಚ್ಚಿಗೆ ಆಗಲಿಕ್ಕೆ ಸಾಧ್ಯವಿಲ್ಲ ಎಂದು ಪಾಲಿಕೆ ಅಭಿಯಂತರರು ತಿಳಿಸಿದರು.

ನಗರದ ಕೆಲವು ಪ್ರಮುಖ ರಸ್ತೆಗಳಲ್ಲಿ ಮರಗಳಿಗೆ ಪಾತಿ ಕಟ್ಟುವ ಕಾರ್ಯ ಕೈಗೊಳ್ಳಲಾಗಿದೆ. ಆದರೆ ಇದುವರೆಗೆ ಗುತ್ತಿಗೆದಾರರಿಗೆ ಪಾಲಿಕೆಯಿಂದ ಈ ಪ್ರಯುಕ್ತ ಸ್ವಲ್ಪವೂ ಹಣ ಪಾವತಿಯಾಗಿರುವುದಿಲ್ಲವೆಂದು ಕೂಡಾ ತಿಳಿಸಿದರು.

ಈ ಯೋಜನೆ ಪರಿಸರ ರಕ್ಷಣೆ ದೃಷ್ಟಿಯಿಂದ ಬಹಳ ಪ್ರಮುಖವಾದದ್ದು, ಇದರಿಂದ ಪಾಲಿಕೆಗೆ ಆರ್ಥಿಕ ಹೊರೆಯಾಗದ ಮತ್ತು ಯಾವುದೇ ರೀತಿಯ ಟೀಕೆಗೆ ಗುರಿಯಾಗದ ರೀತಿಯಲ್ಲಿ ಅನುಷ್ಠಾನಗೊಳಿಸಬೇಕಾಗಿದೆ ಎಂದು ತಿಳಿಸಿ, ಪಾಲಿಕೆ ಆಯುಕ್ತರು ಈ ಕೆಳಕಂಡ ನಿರ್ದೇಶನಗಳನ್ನು ನೀಡಿದರು.

- ಪ್ರತಿ ವಾರ್ಡ್‌ನಲ್ಲೂ ಮರಗಳ ಸುತ್ತಲು ಪಾತಿ ಮಾಡುವ ಕಾರ್ಯಕ್ಕೆ ಸಂಬಂಧಿಸಿದಂತೆ, ಒಂದು ವಿವರವಾದ ಕ್ರಿಯಾ ಯೋಜನೆ ಸಿದ್ಧಪಡಿಸುವುದು. ಅದರಂತೆ ಹಂತ ಹಂತವಾಗಿ ಕಾರ್ಯ ನಿರ್ವಹಿಸುವುದು.
- ಮರಗಳ ಸುತ್ತಲೂ ಪಾತಿ ಕಟ್ಟುವ ಕಾರ್ಯವನ್ನು ಖಾಸಗಿ ಸಂಸ್ಥೆಗಳ ಸಹಕಾರದೊಂದಿಗೆ ನಿರ್ವಹಿಸುವುದು. ಪಾಲಿಕೆಯಿಂದ ಒಂದು ಪೈಸೆ ಖರ್ಚು ಮಾಡಕೂಡದು.
- ಈ ಯೋಜನೆಯ ಖರ್ಚು ಅಷ್ಟೊಂದು ದುಬಾರಿಯಾಗದೇ ಇರುವುದರಿಂದ ಪರಿಸರ ಕಾಳಜಿ ಹೊಂದಿರುವ ಉದ್ದಿಮೆದಾರರು, ವಾಣಿಜ್ಯ ಸಂಸ್ಥೆಗಳು, ಶಿಕ್ಷಣ ಸಂಸ್ಥೆಗಳು, ಮಾಹಿತಿ ತಂತ್ರಜ್ಞಾನ ಸಂಸ್ಥೆಗಳು, ಆಸ್ಪತ್ರೆಗಳು, ಅಂಗಡಿ ಮುಗ್ಗಟ್ಟಿನವರು ಸಹಕಾರ ನೀಡಲು ಮುಂದೆ ಬಂದಿದ್ದಾರೆ. ಆದ್ದರಿಂದ ವಲಯ ಜಂಟಿ ಆಯುಕ್ತರು, ಮುಖ್ಯ ಅಭಿಯಂತರರು ಹಾಗೂ ಕಾರ್ಯಪಾಲಕ ಅಭಿಯಂತರರುಗಳು ಅಂತಹ ಸಂಘ ಸಂಸ್ಥೆಗಳನ್ನು ಸಂಪರ್ಕಿಸಿ ಸಹಕಾರ ಪಡೆಯುವುದು. ಇದಕ್ಕೆ ತಗಲುವ ಹಣವನ್ನು ಅವರಿಂದಲೇ ಭರಿಸಲು ಕ್ರಮ ಕೈಗೊಳ್ಳುವುದು.
- ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಜೂನ್ 5 ರಂದು ವಿಶ್ವ ಪರಿಸರ ದಿನವನ್ನು ಬಹಳ ಅರ್ಥಪೂರ್ಣವಾಗಿ ಆಚರಿಸಲು ಉದ್ದೇಶಿಸಿದೆ. ಆ ದಿನದಂದು ಅರಣ್ಯ ಮತ್ತು ತೋಟಗಾರಿಕೆ ಇಲಾಖೆಯವರು ಪಾಲಿಕೆಯ ಎಲ್ಲಾ ಇಲಾಖೆಗಳ ಅಧಿಕಾರಿಗಳು ಹಾಗೂ ಸಾರ್ವಜನಿಕರ ಪಾಲ್ಗೊಳ್ಳುವಿಕೆಯೊಂದಿಗೆ 1 ಲಕ್ಷ ಸಸಿಗಳನ್ನು ನೆಡುವ ಕಾರ್ಯಕ್ರಮ ಹಮ್ಮಿಕೊಳ್ಳಬೇಕು. ಎಲ್ಲಾ ಚುನಾಯಿತ ಪ್ರತಿನಿಧಿಗಳ ಸಹಕಾರದೊಂದಿಗೆ ಪ್ರತಿ ವಾರ್ಡ್‌ನಲ್ಲೂ ಕಾರ್ಯಕ್ರಮ ಹಮ್ಮಿಕೊಳ್ಳುವುದು.
- ಪಾಲಿಕೆಯ ಕಾಮಗಾರಿ, ಅರಣ್ಯ, ತೋಟಗಾರಿಕೆ, ಆರೋಗ್ಯ ವಿಭಾಗದಲ್ಲಿ ಲಭ್ಯವಿರುವ ವಾಹನ ಮತ್ತು ಸಿಬ್ಬಂದಿಯವರನ್ನು ಬಳಸಿಕೊಂಡು ಪಾಲಿಕೆಯಿಂದ ಒಂದಿಷ್ಟು ಕೂಡಾ ಹಣ ಖರ್ಚು ಮಾಡದೇ ಜೂನ್ 5 ರಂದು ಒಂದು ಲಕ್ಷ ಸಸಿ ನೆಡುವಂತೆ ಕ್ರಮ ಕೈಗೊಳ್ಳಲು ಆಯುಕ್ತರು ವಲಯ ಅಪರ / ಜಂಟಿ ಆಯುಕ್ತರುಗಳಿಗೆ ಸೂಚನೆ ನೀಡಿದರು.

ಇದೊಂದು ಪರಿಸರ ಪೂರಕ ಒಳ್ಳೆಯ ಕಾರ್ಯಕ್ರಮವಾಗಿದ್ದು, ಸಾರ್ವಜನಿಕರು, ಸಂಘ ಸಂಸ್ಥೆಗಳು, ಖಾಸಗಿ ಕಂಪನಿಗಳು ಮುಂದೆ ಬಂದು ತಮ್ಮ ಸಹಕಾರ ನೀಡಬೇಕೆಂದು ಪಾಲಿಕೆ ಆಯುಕ್ತರಾದ ಶ್ರೀ ಸಿದ್ದಯ್ಯ ರವರು ಮನವಿ ಮಾಡಿದ್ದಾರೆ.

**ಸಾರ್ವಜನಿಕ ಸಂಪರ್ಕಾಧಿಕಾರಿ**